ಸಾಲಿಗ್ರಾಮ ಹೋಬಳಿಗೆ ಕಡಿಮೆ ವೋಲ್ಟೇಜಿನ ಪರಿಸ್ಥಿತಿ

೧೬೫. (ಡಿ) ಶ್ರೀ ಎಸ್. ನಂಜಪ್ಪ(ಕೆ. ಆರ್. ನಗರ).—ಮಾನ್ಯ ವಾಣಿಜ್ಯ,ಕೈಗಾರಿಕೆ ಹಾಗೂ ವಿದ್ಯುಚ್ಛಕ್ತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸಾಲಿಗ್ರಾಮ ಹೋಬಳಿಯ ಸುಮಾರು ೩೦ ಹಳ್ಳಿಗಳಿಗೆ ವಿದ್ಯುತ್ ಸೌಕರ್ಯವಿದ್ದರೂ ಸಮರ್ಪಕವಾಗಿ ವಿದ್ಯುತ್ ಪೂರೈಕೆಯಾಗದೆ ತೊಂದರೆಯಾಗಿರುವುದು ಸರಕಾರದವರ ಗಮನಕ್ಕೆ ಬಂದಿದೆಯೇ ?

ಆ) ಈ ತೊಂದರೆ ನಿವಾರಿಸಲು ಸಾಲಿಗ್ರಾಮದಲ್ಲಿ ಒಂದು ವಿದ್ಯುತ್ ಉಪಕೇಂದ್ರವನ್ನು ಸ್ಥಾಪಿಸಲು ಸರ್ಕಾರದವರು ಯೋಜಿಸಿರುವರೇ ?

ಇ) ಈ ವಿದ್ಯುತ್ ಕೊರತೆಯನ್ನು ಪರಿಹರಿಸಲು ಸರ್ಕಾರದವರು ಕೈಗೊಂಡಿರುವ ಕ್ರಮವೇನು ?

ಶ್ರೀ ಜೆ. ಹೆಚ್. ಪಟೇಲ್ (ಕೈಗಾರಿಕೆ ಮತ್ತು ವಿದ್ಯುಚ್ಛಕ್ತಿ ಮಂತ್ರಿಗಳು).—

ಅ) ಕಡಿಮೆ ವೋಲ್ಟೇಜಿನ ಸ್ಥಿತಿಯಿರುವುದು ಗಮನಕ್ಕೆ ಬಂದಿದೆ.

ಆ) ಹೌದು.

ಇ) ಕಡಿಮೆ ವೊಲ್ಟೇಜಿನ ಸ್ಥಿತಿ ಸುಧಾರಿಸಲು ಕೆಳಕಂಡ ಸುಧಾರಣಾ ಕ್ರಮಗಳನ್ನು ಯೋಜಿಸಲಾಗಿದೆ.

೧) ೧೪.೭ ಕಿ. ಮಿ. ಉದ್ದ ೧೧ ಕೆ. ವಿ. ಎಕ್ಸ್‌ಪ್ರಸ್ ಲೈನನ್ನು ಕೃಷ್ಣರಾಜನಗರ ಸಭೆ ಸ್ಟೇಷನ್‌ನಿಂದ ಬೇವಿನ ಹಳ್ಳಿಯವರೆಗೆ ಎಳೆಯುವುದು.

೨) ೧೫.೬ ಕಿ. ಮಿ. ಉದ್ದ ೧೧ ಕೆ.ವಿ. ಎಕ್ಸ್‌ಪ್ರೆಸ್ ಲೈನ್‌ನ್ನು ಕೃಷ್ಣರಾಜನಗರ ಸಬ್ ಸ್ಟೇಷನ್‌ನಿಂದ ದಿಡಹಳ್ಳಿಯವರೆಗೆ ಎಳೆಯುವುದು.

ಇವುಗಳಲ್ಲದೆ ಸಾಲಿಗ್ರಾಮದಲ್ಲಿ ಒಂದು ೬೬ ಕೆ.ವಿ. ಸಬ್ ಸ್ಟೇಷನ್ ಸ್ಥಾಪಿಸುವ ಪ್ರಸ್ತಾವವು ಇದೆ. ಸಬ್ ಸ್ಟೇಷನ್ ಸ್ಥಾಪಿಸುವ ಕೆಲಸಕ್ಕೆ ವೇಳೆಯಾಗುವುದರಿಂದ ಎಕ್ಸ್‌ಪ್ರೆಸ್ ಲೈನುಗಳ ಕಾರ್ಯ ಕೈಗೆತ್ತಿಕೊಳ್ಳಲು ಆದೇಶ ನೀಡಿದೆ.

ಮಾನ್ಯ ಕೃಷ್ಣನ್‌ರವರು ಪ್ರಶ್ನೆಗಳನ್ನು ಕೇಳಿದ್ದಕ್ಕೂ ಇದಕ್ಕೂ ಉತ್ತರ ಹೆಚ್ಚು ಕಡಿಮೆ ಒಂದೇ ಸಮನಾಗಿದೆ.

ಶ್ರೀ ಎಸ್. ನಂಜಪ್ಪ.— ಈ ಎಕ್ಸ್‌ಪ್ರೆಸ್ ಲೈನನ್ನು ಎಳೆಯುವ ಆದೇಶವನ್ನು ನೀಡಿದ್ದೇವೆಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಅದಕ್ಕಾಗಿ ನಾನು ಅವರನ್ನು ಅಭಿನಂದಿಸುತ್ತೇನೆ. ಈ ಕೆಲಸವನ್ನು ಯಾವಾಗ ಪ್ರಾರಂಭ ಮಾಡುತ್ತೀರಿ ಮತ್ತು ಯಾವಾಗ ಮುಗಿಸಿಕೊಡುತ್ತೀರಿ ಎಂದು ತಮ್ಮ ಮೂಲಕ ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಜೆ. ಎಚ್. ಪಟೇಲ್.— ನಾನು ನಿಗದಿಯಾದ ದಿನವನ್ನು ಮಾನ್ಯ ಸದಸ್ಯರಿಗೆ ಬರೆದು ತಿಳಿಸುತ್ತೇವೆ. ಎಕ್ಸ್‌ಪ್ರೆಸ್ ಲೈನನ್ನು ಎಳೆಯುವ ಕೆಲಸವನ್ನು ಬೇಗ ತೆಗೆದುಕೊಳ್ಳುತ್ತೇವೆಂದು ಹೇಳಬಯಸುತ್ತೇನೆ ಹಾಗೂ ಇದರ ದಿನವನ್ನು ಮಾನ್ಯ ಸದಸ್ಯರಿಗೆ ಖಂಡಿತವಾಗಿ ತಿಳಿಸುತ್ತೇನೆ.

ಸುಳ್ಯ ತಾಲ್ಲೂಕಿನಲ್ಲಿ ಅರಣ್ಯ ಇಲಾಖೆಯಿಂದ ಭೂ ಸ್ವಾಧೀನ

೨೦೫೬. ಶ್ರೀ ಕೆ. ಕುಶಾಲ (ಸುಳ್ಯ).— ಮಾನ್ಯ ಅರಣ್ಯ, ಗಣಿ ಹಾಗೂ ಭೂ ವಿಜ್ಞಾನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಸುಳ್ಳ ತಾಲ್ಲೂಕಿನಲ್ಲಿ ಅರಣ್ಯ ಇಲಾಖೆಯು ಕಂದಾಯ ಇಲಾಖೆಯ ಜಮೀನುಗಳಾದ ಸಿ ಮತ್ತು ಡಿ ಜಮೀನುಗಳ ಪೈಕಿ ಎಷ್ಟು ಎಕರೆ ಸ್ವಾಧೀನ ಪಡಿಸಿಕೊಳ್ಳಲಾಗಿದೆ. ಮತ್ತು ಎಷ್ಟು ಎಕರೆ ಸ್ವಾಧೀನ ಪಡಿಸಿಕ್ಕೊಲು ಬಾಕಿ ಇರುವುದು ?